**ಸಾಕ್ಷಿಯನ್ನು ದಿಃ 09.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ.ಆರ್ ವಕೀಲರಿಂದಃ-**

ದಾವಾ ಐಟಂ ನಂ.1 ಸರ್ವೆ ನಂ. 180/1 ರಲ್ಲಿ 2 ಎಕರೆ 20 ಗುಂಟೆ ಪೈಕಿ 1 ಎಕರೆ 10 ಗುಂಟೆ, 9 ನೇ ಪ್ರತಿವಾದಿ ತಂದೆ ಕುಮಾರ್ ರವರಿಗೆ ಹಾಗೂ ಉಳಿದ 1 ಎಕರೆ 20 ಗುಂಟೆ, 2 ನೇ ಪ್ರತಿವಾದಿ ಗಂಡ 3 ನೇ ಪ್ರತಿವಾದಿ ತಂದೆ ಹೆಚ್. ಕೆ ಕುಮಾರ್ ರವರ ಹೆಸರಿಗೆ ಎಂ.ಆರ್ ನಂ. 1 /2005-06 ರಂತೆ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ. 1 ರ ವಂಶವೃಕ್ಷ ವನ್ನು ಹಾಜರು ಪಡಿಸಿದ್ದು, ಅದನ್ನು ಸಂಬಂಧಪಟ್ಟ ತಹಸೀಲ್ದಾರ ಕಛೇರಿ ರವರಿಂದ ಪಡೆದು ಹಾಜರು ಪಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ, ಅಲ್ಲದೆ ಅದನ್ನು ಬೇರೆಯವರ ಮೂಲಕ ಪಡೆದಿದ್ದರಿಂದ, ತೊಂದರೆ ಇತ್ತು ಎನ್ನುತ್ತಾರೆ. ನಿಪಿ. 1 ವಂಶವೃಕ್ಷವನ್ನು ಈ ಕೇಸ್ ಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಕ್ಕನ ಹೆಸರು ಮೀನಾಕ್ಷಿ ಎಂದು ಇದ್ದು, ನಿಪಿ. 1 ರ ವಂಶವೃಕ್ಷದಲ್ಲಿ ಮೀನಮ್ಮ ಎಂದು ಬರೆಸಿದ್ದರೆ ಅದು ಸುಳ್ಳು ಎಂದರೆ ಅವರು ಹಾಗೆ ಬರೆದಿರುತ್ತಾರೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನಾನೆ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಮೀನಾಕ್ಷಿ ರವರ ಗಂಡ ಚಂದ್ರೇಗೌಡ, ಅವರು ಜೀವಂತ ಇದ್ದಾರೆ. ಸದರಿ ಚಂದ್ರೇಗೌಡ ಮತ್ತು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ. 2 ರ ದಾಖಲೆಯ ಸರ್ವೆ ನಂ. 180/1 ರಲ್ಲಿ ಒಟ್ಟು ವಿಸ್ತೀರ್ಣ ಎಷ್ಟಿದೆ ಎಂದು ನನಗೆ ಮರೆತು ಹೋಗಿದೆ. ಸರ್ವೆ ನಂ. 180/1 ರಲ್ಲಿ 1 ಎಕರೆ 10 ಗುಂಟೆ ನನ್ನ ಅಣ್ಣ ಹೆಚ್ ಕೆ ವಿಜಯ್ ಕುಮಾರ್ ರವರ ಮರಣಾ ನಂತರ 2 ಮತ್ತು 3 ನೇ ಪ್ರತಿವಾದಿ ರವರ ಹೆಸರಿಗೆ ಎಂ.ಆರ್ ಹೆಚ್ 49/2018-19 ರಂತೆ ಖಾತೆ ಆಗಿರುತ್ತದೆ ಎಂದರೆ ಅವರು ಹಾಗೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 2005 ರಲ್ಲಿ ದಾವಾ ಸ್ವತ್ತುಗಳ ಸಂಬಂಧ ಪಾಲು ವಿಭಾಗ ಪತ್ರ ಮಾಡಿಕೊಂಡ ನಂತರ ವಿಭಾಗಕ್ಕೆ ಬಂದ ಸ್ವತ್ತುಗಳಲ್ಲಿ ಅವರವರು ಅಂದರೆ ವಿಜಯ್ ಕುಮರ್ ಗೆ ಬಂದ ಸ್ವತ್ತಿನಲ್ಲಿ 2 ಮತ್ತು 3 ನೇ ಪ್ರತಿವಾದಿ ಮತ್ತು ಕುಮಾರ್ ರವರ ಸ್ವತ್ತಿನಲ್ಲಿ 9 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನಾವು ಹೋಗುವುದಿಲ್ಲ, ಬರುವುದಿಲ್ಲ ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಐಟಂ ನಂ. 2 ಸರ್ವೆ ನಂ. 170/2 ರಲ್ಲಿ ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ. ನಲ್ಲಿ 7 ಎಕರೆ ಇದೆ ಎಂದು ವಕೀಲರಿಗೆ ಮಾಹಿತಿ ಕೊಡುವಾಗ ಹೇಳಿದ್ದೆ ಎನ್ನುತ್ತಾರೆ. ಪ್ರಮಾಣ ಪತ್ರ ಸಲ್ಲಿಸುವಾಗ ಪ್ರತಿ ಸರ್ವೆ ನಂಬರ್ ಗಳಲ್ಲಿ ಎಷ್ಟೆಷ್ಟು ಕ್ಷೇತ್ರ ಇವೆ ಎಂದು ನಾನೆ ಹೇಳಿ ಸಲ್ಲಿಸಿರುವುದು ಎಂದರೆ ಸಾಕ್ಷಿ ನಾನೆ ಹೇಳಿ ಸಲ್ಲಿಸಿದ್ದು, ಅದರೆ ಈಗ ಮರೆತಿದ್ದೇನೆ ಎನ್ನುತ್ತಾರೆ. ನಿಪಿ.1 ರಿಂದ 21 ರ ದಾಖಲೆಗಳನ್ನು ಈ ಕೇಸ್ ಗಾಗಿ ಸೃಷ್ಟಿ ಮಾಡಿ ತಂದು ಹಾಕಿರುವುದು ಎಂದರೆ ಜಮೀನು ಬೇಕು ಎಂತಲೆ ಸದರಿ ದಾಖಲೆ ಹಾಜರು ಮಾಡಿರುವುದು ಎಂದು ನುಡಿಯುತ್ತಾರೆ.

ದಾವಾ ಐಟಂ ನಂ. 2 ಸರ್ವೆ ನಂ. 170/2 ರ ಒಟ್ಟು ವಿಸ್ತೀರ್ಣ 1 ಎಕರೆ 10– 1/2 ಗುಂಟೆ ಇದೆ ಎಂದರೆ ಜಾಸ್ತಿ ಇದೆ ಅಂದರೆ 2 ಎಕರೆ 7 ಗುಂಟೆ ಇರಬಹುದು ಎನ್ನುತ್ತಾರೆ. ದಾವೆಯಲ್ಲಿ ಎಷ್ಟು ವಿಸ್ತೀರ್ಣ ಎಂದು ಬರೆಸಿ ಹಾಕಿದ್ದಿರಾ ಎಂದರೆ ಈಗ ನನಗೆ ಮರೆತು ಹೋಗಿದೆ ಎನ್ನುತ್ತಾರೆ. ಹಾಗಾದರೆ ಸದರಿ ಸರ್ವೆ ನಂ. ನಲ್ಲಿ 2 ಎಕರೆ 7 ಗುಂಟೆ ಎಂದು ಹೇಳಿದ್ದು, ನಿಪಿ. 3 ರ ದಾಖಲೆಯಲ್ಲಿ 1 ಎಕರೆ 10–1/2 ಗುಂಟೆ ಎಂದು ಇದ್ದರೆ ಅದು ಸುಳ್ಳು ದಾಖಲೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 3 ಸರ್ವೆ ನಂ. 170/9 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದರೆ ನನಗೆ ಮರೆತು ಹೋಗಿದೆ ಎನ್ನುತ್ತಾರೆ. ಸದರಿ ಸರ್ವೆ ನಂಬರ್ ನಲ್ಲಿ 25 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ 25 ಗುಂಟೆ ಜಮೀನು 2005–06 ನೇ ಸಾಲಿನಲ್ಲಿ ವಿಜಯ್ ಕುಮಾರ್ ರವರ ಹೆಸರಿಗೆ 1/2005–06 ರಂತೆ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ದಾವಾ ಐಟಂ ನಂ. 3 ರ ಸರ್ವೆ ನಂ.170/9 ರಲ್ಲಿ 25 ಗುಂಟೆ ಜಮೀನು ತಮ್ಮ ಸ್ವಾಧೀನದಲ್ಲಿ ಇದ್ದು, 3 ನೇ ಪ್ರತಿವಾದಿ ಮದುವೆ ಉದ್ದೇಶಕ್ಕಾಗಿ ಮಾರಾಟ ಮಾಡಿದ್ದರು ಎಂದರೆ ಸದರಿ ವಿಷಯ ನನಗೆ ತಲುಪಿಲ್ಲ ಎನ್ನುತ್ತಾರೆ. 10 ನೇ ಪ್ರತಿವಾದಿ ಪ್ರಜ್ವಲ್ ಹೆಚ್.ಪಿ ರವರನ್ನು ಯಾವ ಉದ್ದೇಶಕ್ಕಾಗಿ ಸೇರಿಸಿದ್ದಿರಿ ಎಂದರೆ ನಮಗೆ ಗೊತ್ತಿಲ್ಲದೆ ಜಮೀನನ್ನು ಖರೀದಿ ಮಾಡಿದ್ದರು ಎಂದು ಸೇರಿಸಿದ್ದೇವೆ ಎನ್ನುತ್ತಾರೆ. ಖರೀದಿ ಮಾಡಿದ ಜಮೀನಿನ ಖಾತೆ ವಗೈರೆ 10 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಸ್ವತ್ತನ್ನು ಮಾರಾಟ ಮಾಡಲು 3 ಮತ್ತು 4 ನೇ ಪ್ರತಿವಾದಿಗೆ ಸಂಪೂರ್ಣ ಅಧಿಕಾರ ಇತ್ತು ಎಂದರೆ ಸರಿ.

ನಮ್ಮ ತಾತನ ಹೆಸರು ಮೂಗೇಗೌಡ, ಅವರ ತಂದೆ ಹೆಸರು ನನಗೆ ಗೊತ್ತಿಲ್ಲ. ನಮ್ಮ ತಾತನನ್ನು ಮೂಗೇಗೌಡ ಅಲಿಯಾಸ್ ತಿಮ್ಮೇಗೌಡ ಎಂದು ಸಹ ಕರೆಯುತ್ತಿದ್ದರು ಎಂದರೆ ಸರಿ. ನಿಪಿ. 6 ರಿಂದ 21 ರ ದಾಖಲೆಗಳು ನಮ್ಮ ತಾತನಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಮ್ಮ ಊರು ಹೊನ್ನೇನಹಳ್ಳಿಯಲ್ಲಿ ಮೂಗೇಗೌಡ ಮತ್ತು ತಿಮ್ಮೇಗೌಡ ಎಂಬುವವರು ತುಂಬಾ ಜನ ಇದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ನಿಪಿ.6 ರಿಂದ 21 ರ ದಾಖಲೆಗಳಲ್ಲಿ ತಂದೆ ಹೆಸರು ಇಲ್ಲ ಎಂದರೆ ಸರಿಯಲ್ಲ. ನಿಪಿ.19 ರ ಇಂಡೆಕ್ಸ್ ಆಫ್ ಲ್ಯಾಂಡ್ಸ್ ನಲ್ಲಿ ತಂದೆ ತಿಮ್ಮೇಗೌಡ ಊರುಫ್ ಮೂಗೇಗೌಡ ರವರಿಗೆ ಸಂಬಂಧಿಸಿದ್ದು, ತಾತನಿಗೆ ಸಂಬಂಧಿಸಿದ್ದಲ್ಲ ಎಂದರೆ ಮೂಗೇಗೌಡರಿಗೆ ಸೇರಿದ್ದು ಎನ್ನುತ್ತಾರೆ.

ವಾರಂಚಿ ಗ್ರಾಮದಲ್ಲಿ ಇದ್ದ ಜಮೀನು ದರಖಾಸ್ತು ಮೂಲಕ ಕರೀಗೌಡ ಬಿನ್ ಕರೀಗೌಡ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ವಾರಂಚಿ ಗ್ರಾಮದಲ್ಲಿ ನಮ್ಮ ತಂದೆಗಾಗಲಿ, ತಾತನಿಗಾಗಲಿ ಯಾವುದೆ ಜಮೀನು ಇರಲಿಲ್ಲ. ಈ ಕೇಸಿನಲ್ಲಿ ವಕೀಲರ ಮೂಲಕ ಸಲ್ಲಿಸಿದ ವಕಾಲತ್ ನಲ್ಲಿ ಸಹಿ ನನ್ನದೆ ಇರುತ್ತದೆ, ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ ಓ.ಎಸ್ 37/2018 ರಲ್ಲಿ ಸಲ್ಲಿಸಿದ ವಕಾಲತ್ ಆಗಿದ್ದು, ಅದರಲ್ಲಿರುವ ಸಹಿ ತನ್ನದೆ ಎಂದು ಗುರುತಿಸಿರುತ್ತಾರೆ. ಸದರಿ ವಕಾಲತ್ ನ ದೃಡೀಕೃತ ಪ್ರತಿಯನ್ನು **ನಿಡಿ. 1** ಎಂದು ಗುರುತಿಸಲಾಯಿತು. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಸಹಿ ಮತ್ತು ಇನ್ನೊಂದು ದಾಖಲೆ ಓ.ಎಸ್ 37/2018 ರಲ್ಲಿನ ರಾಜಿ ಅರ್ಜಿಯಲ್ಲಿನ ಸಹಿ ತೋರಿಸಲಾಗಿ, ಎರಡೂ ಸಹಿಗಳು ನನ್ನದೆ ಆದರೆ ನಾನು ಮಾಡಿಲ್ಲ ಎನ್ನುತ್ತಾರೆ.

ವಾರಂಚಿ ಗ್ರಾಮದ ಸರ್ವೆ ನಂ. 25/39, 40, 41ಬಿ ರಲ್ಲಿ 4 ಎಕರೆ 38 ಗುಂಟೆಯನ್ನು ತಂದೆಯನ್ನು ಪುಸಲಾಯಿಸಿ ಎಕರೆಗೆ 20 ಲಕ್ಷದಂತೆ 1 ಕೋಟಿ ರೂ. ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ. ನ ಜಾಗವನ್ನು ಡೋನಾಲ್ಡ್ ಪೀಟರ್ ವಾಸ್ ಕರಾರು ಪತ್ರವನ್ನು ಮಾಡಿಸಿಕೊಂಡು ಅಂದಿನ ಮಾರುಕಟ್ಟೆ ಬೆಲೆಯ 16 ಲಕ್ಷ ರೂ. ಗಳಿಗೆ ಕರಾರು ಮಾಡಿಸಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ. ಮುಂದೆ ತೊಂದರೆ ಆಗಬಾರದೆಂದು ಮಾರುಕಟ್ಟೆ ಬೆಲೆ 16 ಲಕ್ಷ ತೋರಿಸಿದ್ದು, ನಂತರ 21 ಲಕ್ಷಕ್ಕೆ ರೂ. ಗಳಿಗೆ ನಾವೆಲ್ಲರೂ ರಾಜೀ ಮಾಡಿಸಿಕೊಂಡಿದ್ದೇವೆ ಎಂದರೆ ಸುಳ್ಳು ಎನ್ನುತ್ತಾರೆ. ಹಾಗೆ ಮಾರಾಟ ಮಾಡಿ ಬಂದ 1 ಕೋಟಿ ರೂ. ಹಣವನ್ನು ಅಣ್ಣ , ತಮ್ಮ, ತಾಯಿಗೆ ಕೊಡದೆ ನಾನೆ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ಓ.ಎಸ್ 37/2018 ರ ದಾವೆಯಲ್ಲಿ ತೋರಿಸಿರುವ ಪಕ್ಷಗಾರರು ನಾನು, ನನ್ನ ಅಣ್ಣ , ತಮ್ಮ, ಮತ್ತು ತಾಯಿ ಎಂದರೆ ಸರಿ. ಸದರಿ ಕೇಸ್

ನಲ್ಲಿ ಬಂದತಂಹ ಹಣವನ್ನು 2 ನೇ ಪ್ರತಿವಾದಿಗಾಗಲಿ, 3 ನೇ ಪ್ರತಿವಾದಿಗಾಗಲಿ ಗೊತ್ತಾಗದ ಹಾಗೆ ನಾನು, ನನ್ನ ಅಣ್ಣ ಮತ್ತು ತಾಯಿ ಮೋಸದಿಂದ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಿಡಿ. 1 ರ ವಕಾಲತ್ ನಲ್ಲಿರುವ ಹೆಚ್. ಕೆ ವಿಜಯ ರವರ ಸಹಿ ಮತ್ತು ಈಗ ತೋರಿಸಿದ ದಾಖಲೆಯಾದ ವಿಭಾಗ ಪತ್ರದಲ್ಲಿ ಹೆಚ್. ಕೆ. ವಿಜಯ ಕುಮಾರ್ ಸಹಿ ಬೇರೆ ಬೇರೆ ಇದೆ ಎಂದರೆ ಸರಿ. ಮೇಲೆ ಹೇಳಿದ ಕರಾರು ಪತ್ರ ಆಗುವಾಗ, ರಾಜಿ ಅರ್ಜಿ ಸಲ್ಲಿಸುವಾಗ ವಿಜಯ ಕುಮಾರ್ ಕಡಿತದ ದಾಸನಾಗಿ ಯಾವುದೆ ವಿಚಾರ ತಿಳಿಯದೆ ಇದ್ದಾಗ ಬೇರೆಯವರನ್ನು ಕರೆದುಕೊಂಡು ಹೋಗಿ ಆ ರೀತಿ ಸಹಿ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರು ರಮೇಶ್, ನನ್ನ ಗಂಡ ರಮೇಶ್, ಅಣ್ಣ ವಿಜಯ್ ಕುಮಾರ್, ತಂದೆ, ತಾಯಿ ಮೇಲೆ 2 ನೇ ಪ್ರತಿವಾದಿಗೆ ಹೊಡಿ ಬಡಿ ಮಾಡಿ ಹಿಂಸೆ ಮಾಡುತ್ತಿದ್ದರು ಎಂದು ದಿಃ 21.09.2016 ರಂದು ದೂರು ಕೊಟ್ಟಿದ್ದರು ಎಂದರೆ ಅದೆಲ್ಲಾ ಸುಳ್ಳು ಎನ್ನುತ್ತಾರೆ. ಹಾಗೆ ದೂರು ಕೊಟ್ಟ ನಂತರ ಗ್ರಾಮಸ್ಥರ ಮುಂದೆ ಇನ್ನು ಮುಂದೆ ಹೊಡಿ ಬಡಿ ಮಾಡುವುದಿಲ್ಲ ಎಂದು ಠಾಣೆಗೆ ಬಂದು ಮುಚ್ಚಳಿಕೆ ಬರೆದುಕೊಟ್ಟಿದ್ದೆವು ಎಂದರೆ ಸುಳ್ಳು. ದಿಃ 02.02.2010 ಮತ್ತು ದಿಃ 28.10.2011 ರಂದು 3 ನೇ ಪ್ರತಿವಾದಿ ದೂರುಕೊಟ್ಟಿದ್ದರು ಎಂದರೆ ಸುಳ್ಳು. ಸದರಿ ಪ್ರಕರಣದಲ್ಲಿ ಇನ್ನು ಮುಂದೆ ಗಲಾಟೆ ಮಾಡುವುದಿಲ್ಲ ಎಂದು ಠಾಣೆಗೆ ಬಂದು ಮುಚ್ಚಳಿಕೆ ಬರೆದು ಕೊಟ್ಟಿದ್ದೇವು ಎಂದರೆ ಸರಿಯಲ್ಲ. ಈಗಾಗಲೆ ನಮ್ಮ ಕುಟುಂಬದಲ್ಲಿ ವಿಭಾಗ ಆಗಿ 20 ವರ್ಷಗಳು ಕಳೆದಿದ್ದರಿಂದ ಈಗ ಪಾಲು ಕೇಳಲು ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾರಂಚಿ ಗ್ರಾಮದ 4 ಎಕರೆ 38 ಗುಂಟೆ ಜಮೀನನ್ನು ಈಗಾಗಲೆ ಭಾಗಾಂಶ ಆಗಿ ಅದನ್ನು ಮಾರಾಟ ಮಾಡಿದ್ದರಿಂದ ಈಗ ನನಗೆ ಭಾಗ ಕೇಳಲು ಹಕ್ಕಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.